Regd. No M. 1299 SATYAVADI Founded 1917

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 250 | ಶನಿವಾರ 31—5—47 | ಬಿಡಿ ಪ್ರತಿ 3 ಪೈ

## ಸನಾತನ ಧರ್ಮ ಸಮ್ಮೇಳನ

ಸ್ವ. ಸು. ತಂತಿ | ಶಿವಮೊಗ್ಗ ಮೆ 30 ತಾ|| 27 ರಲ್ಲಿ ಆಗಮ ತಾ|| 28 ರಲ್ಲಿ ಸನಾತನ ಧರ್ಮ ಸಮ್ಮೇಳನಗಳು ಶ್ರೀ ದ್ವಾರಕಾ ಜಗದ್ಗುರು ಶ್ರೀ ತಂತ ರಾಚಾರ್ಯ ಮಹಾರಾಜರವರ ಘನ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆದವು. ಸನಾತನ ಹಿಂದೂ ಧರ್ಮ ಸಂಬಂಧದಲ್ಲಿ ವಿಶ್ವಾಧಿಪತಿಗಳ ಅನುಮತಿಯಿಲ್ಲದೆ ಎನೊಂದು ಶಾಸನವನ್ನು ಯಾವ ಸರಕಾರವೂ ಮಾಡಕೂಡದೆಂದೂ, ಮಧ್ರಾಸು ಸರಕಾರದ ರಲಿಜಸ್ ಎಂಡೋಮೆಂಟು ಆಕ್ಟು ಮೊದಲಾದ ವಿಶ್ವಾಧಿಪತಿಗಳನ್ನು ಎಂಡೋಮೆಂಟು ಬೋರ್ಡಿನ ಸೇವಕರಂತೆ ಮಾಡಿ ಧರ್ಮಾಚಾರ್ಯರ ಧರ್ಮ ಪ್ರಚಾರಕಾರ್ಯಕ್ಕೆ ಅಡ್ಡಿ ಪಡಿಸತಕ್ಕುದಾಗಿದ್ದು ಅದು ಸನಾತನ ಪ್ರಪಂಚಕ್ಕೆ ಭಯಂಕರವಾಗಿರುವುದರಿಂದ ಅದನ್ನು ವಿಚಾರ ಮಾಡಬೇಕೆಂಬುದಾಗಿ ಈ ಸಮ್ಮೇಳನ ಒತ್ತಾಯಪಡಿಸುತ್ತದೆಂದೂ, ಮೈಸೂರು ಸಂಸ್ಥಾನದಲ್ಲಿ ಅಧರ್ಮ ಮಸೂದೆಗಳಿಗೆ ಅವಕಾಶಕೊಡದಿರುವುದಕ್ಕಾಗಿ ಮೈಸೂರಿನ ಶ್ರೀಮನ್ಮಹಾರಾಜರವರನ್ನು ಮೈಸೂರು ಸರಕಾರವನ್ನು ಈ ಸಮ್ಮೇಳನ ಅಭಿನಂದಿಸುತ್ತದೆಂದೂ, ಬಲಾತ್ಕಾರದಿಂದ ಮತಾಂತರ ಗೊಳಿಸಲ್ಪಟ್ಟ ಹಿಂದೂಗಳನ್ನು ಧರ್ಮ ಶಾಸ್ತ್ರ ಪ್ರಕಾರ ಹಿಂದೂ ಮತಕ್ಕೆ ಪುನಃ ಕೆಗೆಡು ಕೊಳ್ಳಬಹುದೆಂದೂ ತೀರಾವುಗಳು ಮಂಜೂರಾದವು

ಶ್ರೀ ಜಗದ್ಗುರುಗಳು ತಾ|| 29 ರಲ್ಲಿ 40 ಮಂದಿ ವಿದ್ವಾಂಸರಿಗೆ ಬಿರುದನ್ನು ದಯಪಾಲಿಸಿ ತಾ|| 30 ರಲ್ಲಿ ದೂ ವರ್ಣಸಪುರಕ್ಕೆ ಪ್ರಯಾಣ ಬೆಳೆಸಿದರು.

—

ಮದರಾಸು ಮೆ 28 — ನಗರದಲ್ಲಿ 7 ಮಂದಿ ಮ್ಯಾಜಿಸ್ಟ್ರೇಟರುಗಳಿರಬೇಕೆಂದು ಎಗ್ಮೋರು ಬಾರ್ ಅಸೋಸಿಯೇಷನ್ ತೀರಾವನ್ನು ಮಂಜೂರ್ ಮಾಡಿದೆ

ಭೂಪಾಲ್ ಮೆ 27 — ಭೂಪಾಲಿಗೆ 107 ಮೈಲಿ ಆಚೆ ಇರುವ ಡಿಯೋರಿಯಲ್ಲಿ ಅಗ್ನಿ ಪ್ರಮಾದದಿಂದ 250 ಮನೆಗಳು ಭಸ್ಮೀಭೂತವಾದುದಕ್ಕೆ ಮಾಲೀಕರಿಗೆ ಪರಿಹಾರವಾಗಿ ನವಾಬರು 1 ಲಕ್ಷ ರೂ. ಮಂಜೂರು ಮಾಡಿದ್ದಾರೆ.

## 'ಒತ್ತಾಯದಿಂದ ಒಂದು ಅಂಗುಲ ಪಾಕಿಸ್ತಾನವೂ ಇಲ್ಲ'

ನವದೆಹಲಿ ಮೆ 29 — ಇಡೀ ದೇಶವೇ ಬೆಂಕಿ ಜ್ವಾಲೆಗೆ ತುತ್ತಾದರೂ ಬಲಾತ್ಕಾರದಿಂದ ಪಾಕಿಸ್ತಾನ ಕೊಡಲು ನಾನುದ್ಯುಕ್ತನಾಗುವುದಿಲ್ಲ. ಶಾಂತಿ ಮತ್ತು ಸೌಹಾರ್ದ ವಾತಾವರಣದಲ್ಲಿ ಚರ್ಚೆ ನಡೆಸಿದಲ್ಲಿ ಮುಸ್ಲಿಂ ಲೀಗು ಲಾಭ ಹೊಂದಬಹುದು ಅನ್ಯಥಾ ಅಲ್ಲ ಎಂದು ಗಾಂಧೀಜೀ ಈ ದಿನದ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು

ನವದೆಹಲಿ ಮೆ 28 — ಭಾರತದ ವಿಭಜನೆಯು ವಿಷಯವನ್ನು ಸ್ವತಂತ್ರ ಭಾರತ ನಿರ್ಧರಿಸಬೇಕೆಂದೂ ತಾತ್ಕಾಲಿಕ ಸರಕಾರಕ್ಕೆ ಡೊಮಿನಿಯನ್ ಸ್ಟೇಟ್ಸ್ ಕೊಡಬೇಕೆಂದೂ ಶ್ರೀ ಶಂಕರಲಾಲ್ ದೇವರು ಹೇಳಿದ್ದಾರೆ.

ನವದೆಹಲಿ ಮೇ 29 — ಜೂನ್ 2 ಕ್ಕೆ ಮುಂಚೆ ನೈಸಾಯರು ಪ್ರಮುಖ ಭಾರತ ಮುಖಂಡರೊಡನೆ ಮಾತುಕತೆ ನಡೆಸಬಹುದೆಂದು ಹೇಳಲಾಗಿದೆ.

## ಇಂದಿನ ವರ್ತಮಾನ

ಬೆಂಗಳೂರು ಮೇ 29— ಅಸೆಂಬ್ಲಿಯಲ್ಲಿ ಬಂದ ತೊಗರೀಬೆಳೆ ವಿಷಯದ ನಿಲುವಳಿ ಸೂಚನೆಯು ವಿರೋಧವಿಲ್ಲದೆ ಪ್ಯಾಸಾಯಿತು

ಕಲ್ಕತ್ತಾ ಮೆ 29 — ಗಲಭೆ ಅಡಗಿಸಲು ಪೋಲೀಸು 2 ಸಾರಿ ಗುಂಡು ಹಾರಿಸಿದರು. 5 ಜನ ಸತ್ತರು 12 ಮಂದಿ ಗಾಯಗೊಂಡರು.

ಹೈದರಾಬಾದು ಮೆ 29 — ರಾಯಚೂರ್ ಹಳ್ಳಿಯಲ್ಲಿ ಕೋಮುವಾರು ಗಲಭೆ ಅಡಗಿಸಲು ಪೋಲೀಸು ಗುಂಡು ಹಾರಿಸಿದರು. 10 ಮಂದಿ ಸತ್ತರು ಒಬ್ಬ ಗಾಯಗೊಂಡನು.

ಹೈದರಾಬಾದು ಮೆ 29 — ನೈಜಾಮರು ಸರ್ ವಿಜ್ಞಾರವರ ರಾಜೀನಾಮೆಯನ್ನು ಕ್ಷಿಪ್ರದಲ್ಲೇ ಅಂಗೀಕರಿಸುವರೆಂದೂ ಚತ್ತಾರಿ ನವಾಬ ಸಾಹೇಬರು ಹೈದರಾಬಾದಿನ ಮುಖ್ಯಮಂತ್ರಿಗಳಾಗಬಹುದೆಂದೂ ಹೇಳಲಾಗಿದೆ

**BANGALORE RACES 1947.**

ಬೆಂಗಳೂರು ರೇಸಸ್ ೧೯೪೭

ಜೂನ್ 4, 7, 11, 14, 18, 21 ಮತ್ತು 25 ರಲ್ಲಿ

ಬುಕ್ ಮೇಕರ್ಸ್ ಮತ್ತು ಟೋಟಲೈಜೇಟರ್ಸ್

ರೂ. 2 ಸ್ವೀಪ್ ಮತ್ತ, ರೂ. 5 ಟ್ರಿಬಲ್ ಈವೆಂಟ್

1 st ಟೋಟ್ ರೂ, 10. 11 nd ಟೋಟ್ ರೂ. 5,

ಪ್ರವೇಶ — ಮೊದಲನೇ ತರಗತಿ ....ಪುರುಷರು—ರೂ. 6 ಒಂದು ದಿನಕ್ಕೆ

" ....ಸ್ತ್ರೀಯರು—ರೂ. 4 "

ಎರಡನೇ ತರಗತಿ....ಪುರುಷರು
ಆಥವಾ
ಸ್ತ್ರೀಯರು } ರೂ. 2 "

(ಶುಭ)

## ವೃತ್ತಾಂತ ಸಂಗ್ರಹ

ನವದೆಹಲಿ ಮೇ 27 — ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳಲ್ಲಿ ತಲಾ 7 ಲಕ್ಷ ಟನ್ ಆಹಾರ ಧಾನ್ಯಗಳನ್ನು ಭಾರತಕ್ಕೆ ಕೊಡುವುದಾಗಿ ಅಂತರ ರಾಷ್ಟ್ರೀಯ ಆಹಾರ ಸಮಿತಿ ತೀರ್ಮಾನಿಸದೆ. ಆದರೆ ಇದು ಸಾಲದು ಎಂದು ಕೇಂದ್ರ ಆಹಾರ ಇಲಾಖೆ ಡೈರೆಕ್ಟರ್ ಜನರಲ್ಲರು ಅಧಿಕಾರಿಗಳ ಸಮಿತಿಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ಮೆ 30 — ಪ್ರಯಾಣೀಕರು ತಮ್ಮ ಖಾಸಗಿ ಲಗೇಜಿನಲ್ಲಿ ವಲನಾಡು ಮತ್ತು ಅರ್ಧ ಮಲೆನಾಡು ತಾಲ್ಲೂಕುಗಳಲ್ಲಿ 3 ಮಣಕ್ಕೆ ಹೆಚ್ಚಿಲ್ಲದಂತೆಯೂ, ಇತರ ಕಡೆಗಳಲ್ಲಿ ಅರ್ಧ ಮಣಕ್ಕೆ ಹೆಚ್ಚಿಲ್ಲದಂತೆಯೂ ಬೆಲ್ಲವನ್ನು ಸಾಗಿಸಬಹುದೆಂದು ಸರಕಾರಿ ಅಪ್ಪಣೆಯಾಗಿದೆ.

ಲಂಡನ್ ಮೆ 27 — ಇಟಲಿ ಕಾಲನಿಗಳ ಭವಿಷ್ಯ ವಿಚಾರ ಚರ್ಚಿಸುವುದರಲ್ಲಿ ಭಾಗವಹಿಸಲು ರಷ್ಯಾ ಒಪ್ಪಿದೆ.

### ಅಕ್ಷತೆಗಳು

'ಕೈಲಾಸದಲ್ಲಿ ಗಾಂಧೀಜೀ ಮಾರ್ಗದಲ್ಲಿ ನಡೆಯಿರಿ. ಹಾಗಾಗದಿದ್ದಲ್ಲಿ ನಿಮ್ಮ ದಾರಿಯಲ್ಲಿ ನೀವು ನಡೆಯಿರಿ' ಎಂದು ಗುಜರಾತಿಗಳು ತಮ್ಮ ಗೌರವಾರ್ಥವಾಗಿ ಏರ್ಪಡಿಸಿದ್ದ ಕೂಟದಲ್ಲಿ ಶ್ರೀ ಪಟೇಲರವರು ತಿಳಿಸಿದರು. ಚನ್ನಾಗಿಯೇ ಇದೆ. ಆದರೆ ಗಂಡು ಮಗು ಆಗದಿದ್ದರೆ ಹೆಣ್ಣು ಮಗು ಎನ್ನುವಂತೆ ಏದೆ. ಈ ನುಡಿಯನ್ನು 25 ವರ್ಷಗಳ ಹಿಂದೆಯೇ ಹೇಳಿದ್ದಿದ್ದಲ್ಲಿ ಬಹಳ ಮಂದಿ ಉದ್ಧಾರವಾಗುತ್ತಿದ್ದರೂ ಉತ್ತಮ ಸ್ಥಿತಿಗೆ ಬರುತ್ತಿದ್ದರು.

ಸಂಧೂ ರಾಷ್ಟ್ರಕ್ಕೆ ಭಾರತ ಸರ್ಕಾರವು 387 ಲಕ್ಷ ರೂಗಳನ್ನು ದಾನ ಮಾಡಿದೆ. ಹೌದು. ಅಲ್ಲಿ ಇರುವದು ಲೀಗು ಆಡಳಿತ. ಎಲ್ಲಾ ಆರ್ಥಿಕ ಸಭ್ಯನು ಸಾಕ್ಷಾತ್ ನವಾಬ್ ಜಾಡಾ !

ಇದು ಟೆಲಿಗ್ರಾಮುಗಳ ಯುಗ. ಬೆಂಗಾಲದ ವಿಭಜನೆ ಯಾಗಬೇಕೆಂದು 10 ಸಾವಿರ ಟೆಲಿಗ್ರಾಮುಗಳು ರಾಜ ಪ್ರತಿನಿಧಿಗೆ ತಲಪಿದವಂತೆ. ಯಾರ ಯಾರಿಗೆ ಪ್ರತ್ಯೇಕ ರಾಷ್ಟ್ರವಾಗಬೇಕೋ ಅವರೆಲ್ಲಾ ಟೆಲಿಗ್ರಾಮುಗಳನ್ನು ಜಾರ್ಜ್ ಚಕ್ರವರ್ತಿಯವರಿಗೆ ಕಳಿಸುವದು ಉತ್ತಮವಲ್ಲವೆ !

## ಪ್ರ. ಪ್ರ. ಸಭೆ ಮೇ ೩೦

ಪುಟ್ಟಣ್ಣಶೆಟ್ಟರ ಪುಂಭವನ ( ಬೆಂಗಳೂರು )

ಈ ದಿನದ ಸಭೆಯು 12–20 ಕ್ಕೆ ಇಕ್ ಚಾರ್ಜ್ ದಿವಾನರಾದ ಡಾ|| ರಾಯ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಭಟ್ಟಿ ಪರಿಸ್ಥಿತಿ ಬಗ್ಗೆ ಪ್ರಶ್ನೋತ್ತರ ಆರಂಭವಾಯಿತು.

ಕೋರಂ ಇಲ್ಲದಿರುವ ವಿಷಯವನ್ನು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಎತ್ತಿದ್ದರು. ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಗುಪ್ತರೂ ಒಂದು ಕೋರಂ ವಿಷಯ ಎತ್ತಿದ್ದರು. ಕಾಂಗ್ರೆಸ್ ಮತ್ತು ಇತರ ಪಕ್ಷದ ಸದಸ್ಯರು ಬೇಕಾಗಿ ಹೀಗೆ ಮಾಡುತ್ತಿರುವುದಾಗಿ ಕೆಲ ಸದಸ್ಯರು ಹೇಳಿದರು. 1–5 ಗಂಟೆ ಹೊತ್ತಿಗೆ ಕೋರಂ ಎಣಿಸಲಾಗಿ ಕೋರಂ ಇಲ್ಲದಿದ್ದರಿಂದ ಸಭೆ 2 ಗಂಟೆವರೆಗೆ ಮುಂದುವರಿಸಲಾಯಿತು.

ಮತ್ತೆ ಸೇರಿದಾಗ ಮಸೂದಾ ವಿಷಯ ಚರ್ಚೆ ಪ್ರಾರಂಭವಾಯಿತು.

## ಮತಕಲಹಗಳು

ಪಾಟ್ನಾದಲ್ಲಿ ಉಭಯ ಮತಗಳಿಗೆ ಸೇರಿದ ಸ್ಕೂಲು ಹುಡುಗರಲ್ಲಿ ಮತಕಲಹವು ಬೆಳೆದು ಹೊಡೆದಾಡಿ ಕೊಂಡರಂತೆ. ಕೆಲವರಿಗೆ ಗಾಯಗಳಾಗಿರುವಂತೆ, ಆಸ್ಪತ್ರೆಯಲ್ಲಿಗೆ ಅವರ ಹಿರಿಯರು ಕೂಡ ಕಲೆತು ಕಲಹವು ಬೆಳೆಯುವರೊಳಗಾಗಿ ಪೋಲೀಸರು ಬಂದು ಪರಿಸ್ಥಿತಿಯನ್ನು ಉತ್ತಮಗೊಳಿಸಿದರು.


.... ವುಡ್‌ಲ್ಯಾಂಡ್ಸ್ ಮೈಸೂರು ....

ತಾ|| 1-6-47 ರಿಂದ ಕಿಕ್ಕಿರಿದ ನೇ 5 ವಾರ

ನಾವು ಇಬ್ಬರು

( ತಮಿಳು )

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಪ್ರತಿದಿನ 2 ಆಟಗಳು

ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ಮ್ಯಾಟ್ನಿ ಉಂಟು



ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸುತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

( ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು )

ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.



## ಬಾಡಿಗೆ ಗಾಡಿಗಳನ್ನು ಇಟ್ಟಿರುವ

### ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ ಬೀಳಬಹುದಾದ ಕಟ್ಟಣವನ್ನು ಪ್ರತಿದಿನವೂ ಮುನಿಸಿಪಲ್ ಸ್ಯೂಯೇಜು ಮತ್ತು ಕಂಪೋಸ್ಟ್ ಫಾರಂಗೆ ಸಾಗಿಸಲು ಇಷ್ಟಪಡುವ ಗಾಡಿ ಮಾಲೀಕರುಗಳು ಈ ಆಫೀಸಿಗೆ ಒಂದು ವಾರದೊಳಗೆ ಈ ಕೆಳಗೆ ರುಜು ಮಾಡಿರುವವರ ರೂಬುರೂಬು ಆಫೀಸು ದಿನಗಳಲ್ಲಿ ಮಧ್ಯಾಹ್ನ 3 ಘಂಟೆಯಿಂದ 4 ಘಂಟೆಯೊಳಗೆ ಹಾಜರಾಗಿ ತಮ್ಮ ಷರತ್ತುಗಳನ್ನು ತಿಳಿಸಿ ಮುನಿಸಿಪಾಲಿಟಿಯ ನಿಯಮಕದಂತೆ ಕೆಲಸವನ್ನೆಪೆಡಿಗಳ ವಿಚಾರದಲ್ಲಿಯೂ ತಿಳುವಳಿಕೆ ಹೊಂದಿ, ಒಪ್ಪಿಗೆಯಾದಹರು ಸರಿಯಾದ ಮುಚ್ಚಳಿಕೆ ಬರೆದುಕೊಟ್ಟು ಶೀಘ್ರವೇ ಹೊಬಲಗು ನಿಖರವಾಗುವಂತೆ ಮುನಿಸಿಪಲ್ ಟ್ಯಾಚರಿಯಲ್ಲಿ ಕಟ್ಟಿ ರತೀತಿ ಪಡೆದು ಕೆಲಸಕ್ಕೆ ಹ್ರಾಜರಾಗಬಹುದಾಗಿ ಈ ಮೂಲಕ ತಿಳಿಯಪಡಿಸಿದೆ.

(ಸಹಿ) ಇ. ಅನಂತರಾವ್

ಹೆಲ್ತ್ ಆಫೀಸರ್



ಅಕ್ಕರ ಸಾಪ್ತಾಹಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp st, MYSORE



'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

At Opera

7 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮೂಲತಿ, ರಾಮುಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)



ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆಣೆ

ಸೋವಿಪಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agrahar, Mysore.